ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 3, July-August 2022, Pp. 1- 6
Bi-Monthly, Peer-Reviewed, Open Access, Indexed Journal

I S S N: 2583-
SIRDF
JOURNALS
editor@srujani.in
www.srujani.in

# ರಂಗಭೂಮಿಗೆ ಬೆಳಗಾವಿ ಪರಿಸರದ ದೇಸಗತಿಗಳು ನೀಡಿದ ಪ್ರೇರಣೆ ಮತ್ತು ಪ್ರೋತ್ಸಾಹ

**ಮಂಜುನಾಥ ರುದ್ರಪ್ಪ ಕೋಟಗಿ***

*ಸಂಶೋಧನಾರ್ಥಿ, ಕನ್ನಡ ವಿಭಾಗ, ಭರತೇಶ ಶಿಕ್ಷಣ ಸಂಸ್ಥೆ, (ಕನ್ನಡ ವಿವಿ ಮಾನ್ಯತಾ ಕೇಂದ್ರ) ಬೆಳಗಾವಿ.

***Abstract:***

*ದೇಸಗತಿ ಪದದ ಅರ್ಥವನ್ನು ನಿರ್ದಿಷ್ಟವಾಗಿ ಅರ್ಥೈಸುವುದು ಅತ್ಯಂತ ಪ್ರಯಾಸದಾಯಕ ಕಾರ್ಯವಾಗಿದೆ. ದೇಸಗತಿ ಪದವು ಅಧಿಕಾರ ವರ್ಗಕ್ಕೆ ಮತ್ತು ದಾಖಲೆಗಳಲ್ಲಿ ಮಾತ್ರ ಬಳಕೆಯಾಗುತ್ತಿತ್ತು ಕುಲೀನ ವರ್ಗಗಳು 'ಧಣಿ' ಎಂಬ ಪದದಿಂದಲೇ ದೇಸಗತಿಯನ್ನು ಗುರುತಿಸುತ್ತಿದ್ದರು. ಸಾಮಾನ್ಯವಾಗಿ ಜನ ಸಾಮಾನ್ಯರ ಪ್ರೀತಿ ವಿಶ್ವಾಸ ಗಳಿಸಿ ಅವರ ನೋವು ನಲಿವನ್ನು ಅರಿತವರು ದೇಸಗತಿಗಳು. ಧನ ಧಾನ್ಯಗಳ ಮೇಲೆ ಇವರು ಸಂಪೂರ್ಣ ಅಧಿಕಾರ ಹೊಂದಿದ್ದರು. ರಾಜಪ್ರಭುತ್ವ ಮತ್ತು ಜನಪದರ ನಡುವಿನ ಆಡಳಿತ ಕಾರ್ಯವನ್ನು ನಡೆಸಿಕೊಂಡು ಹೋಗುವ ಘಟಕವಾಗಿ ದೇಸಗತಿ ಕಾರ್ಯ ನಿರ್ವಹಿಸುತ್ತಿತ್ತು. ಪ್ರಜೆಗಳ ಹಿತಾಸಕ್ತಿಯೊಡನೆ ರಾಜಪ್ರಭುತ್ವಕ್ಕೆ ವಿಧೇಯರಾಗಿ ದೇಸಗತಿಗಳು ಕಾರ್ಯನಿರ್ವಹಿಸುತ್ತಿದ್ದವು. ಪ್ರಾಚೀನ ಭಾರತದ ಗಾವುಂಡ, ಗೌಡ, ನಾಡಗೌಡ ಹಾಗೂ ವಿಜಯನಗರ ಕಾಲದ ನಾಯಕರು, ನಂತರದಲ್ಲಿ ದೇಸಾಯಿ, ದೇಶಮುಖ ಮುಂತಾದವರೆಲ್ಲರ ಕಾರ್ಯ ಒಂದೇ ಆಗಿದ್ದು ಇವುಗಳನ್ನೆಲ್ಲ ಸಮಾನಾರ್ಥಕ ಪದಗಳೆಂದು ಗುರುತಿಸಬಹುದು. ಪ್ರಸ್ತುತ ಲೇಖನದಲ್ಲಿ ರಂಗಭೂಮಿಗೆ ಬೆಳಗಾವಿ ಪರಿಸರದ ದೇಸಗತಿಗಳು ನೀಡಿದ ಪ್ರೇರಣೆ ಮತ್ತು ಪ್ರೋತ್ಸಾಹ ಕುರಿತು ವಿವರಿಸಲಾಗಿದೆ.*

**Keywords:** *ರಂಗಭೂಮಿ, ದೇಸಾಯಿ, ವೃತ್ತಿರಂಗಭೂಮಿ, ದೇಸಗತಿ, ಬೆಳಗಾವಿ.*

## ಪೀಠಿಕೆ

ದೇಸಗತಿ ಎಂಬ ಪದವು ದೇಶ+ಗತಿ ಎಂಬ ಎರಡು ಪದಗಳ ಸಮ್ಮಿಶ್ರಣವಾಗಿದೆ. 'ದೇಶ' ಇದು 'ದೇಶ್ಯ' ಎಂಬ ದ್ರಾವಿಡ ಭಾಷೆಯ ಪದದಿಂದ ಬಂದಿದ್ದು, ದೇಶದಲ್ಲಿ ಹುಟ್ಟಿದ, ವಾಸಿಸುವ ಅಥವಾ ನಿರ್ದಿಷ್ಟ ಸ್ಥಳ, ಪ್ರದೇಶವನ್ನು ಸೂಚಿಸುತ್ತದೆ. 'ಗತ್ತು' ಅಥವಾ 'ಗತಿ' ಎಂಬ ಪದಗಳ ಅರ್ಥವು ಹೊಂದಿರುವುದು ಎಂಬುದನ್ನು ಸೂಚಿಸುತ್ತದೆ. ಹೀಗಾಗಿ ಒಂದು ನಿರ್ದಿಷ್ಟ ಪ್ರದೇಶದ ಆಡಳಿತದ ಅಧಿಕಾರವನ್ನು ಹೊಂದಿರುವುದು ದೇಸಗತಿ ಎಂಬ ಅರ್ಥವನ್ನು ಪಡೆದುಕೊಳ್ಳುತ್ತದೆ.

"ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ 568 ಕ್ಕಿಂತ ಹೆಚ್ಚು ಸಂಸ್ಥಾನಗಳಿದ್ದವು. ಬೆಳಗಾವಿ ಜಿಲ್ಲೆಯಲ್ಲಿ 190 ಇನಾಮದಾರ ಮನೆತನಗಳಿದ್ದವು. ಈ ದೇಸಗತಿಯನ್ನು 'ಸಂಸ್ಥಾನ'ವೆಂದು ಕರೆಯುವ ವಾಡಿಕೆಯಿದೆ. ದೇಸಗತಿಗಳ ಇತಿಹಾಸವೆಂದರೆ ಸಾಮ್ರಾಜ್ಯಗಳ ಹಿನ್ನೆಲೆಯ ಉಲ್ಲೇಖವೇ ಆಗಿದೆ. ದೇಸಾಯರು ಪ್ರಜಾಪಾಲಕರು. ರಾಜ ಮತ್ತು ಪ್ರಜೆಗಳ ನಡುವೆ ಸೇತುವೆಯಾಗಿ ಕಾರ್ಯ ನಿರ್ವಹಿಸಿದವರು. ಸಣ್ಣ ಪುಟ್ಟ ಸಂಸ್ಥಾನಗಳಲ್ಲಿ ದೇಸಾಯರು ಮಹಾರಾಜರಂತೆ ವೈಭಾವೋಪೇತವಾಗಿ

***Please cite this article as:*** ಮಂಜುನಾಥ ರುದ್ರಪ್ಪ ಕೋಟಗಿ. (2022). ರಂಗಭೂಮಿಗೆ ಬೆಳಗಾವಿ ಪರಿಸರದ ದೇಸಗತಿಗಳು ನೀಡಿದ ಪ್ರೇರಣೆ ಮತ್ತು ಪ್ರೋತ್ಸಾಹ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(3), 1–6.

ಮೆರದವರು".[1] 1938ರಲ್ಲಿ ಬೆಳಗಾವಿ ಪರಿಸರದಲ್ಲಿ ಹಲವಾರು ದೇಸಗತಿ ಮನೆತನಗಳು ಅಸ್ತಿತ್ವದಲ್ಲಿದ್ದವು. ಇಂದಿಗೂ ಅನೇಕ ದೇಸಗತಿ ಮನೆತನಗಳು ಇವೆ. ಬೆಳಗಾವಿ ಪರಿಸರದ ದೇಸಗತಿಗಳಲ್ಲಿ ಕಿತ್ತೂರು ದೇಸಗತಿ, ಕಾಕತಿ ದೇಸಗತಿ, ಶಿರಸಂಗಿ ದೇಸಗತಿ, ತಲ್ಲೂರ ದೇಸಗತಿ, ರುದ್ರಾಪುರ ದೇಸಗತಿ, ನೇಗಿನಹಾಳ ದೇಸಗತಿ, ತುರಮರಿ ದೇಸಗತಿ ಹೀಗೆ ಮುಂತಾದ ಪ್ರಮುಖ ದೇಸಗತಿಗಳನ್ನು ಕಾಣುತ್ತೇವೆ. ಆದರೆ ರಂಗಭೂಮಿಗೆ ನೀಡಿದ ಕೊಡುಗೆಗಳ ಕುರಿತು ಸ್ಪಷ್ಟ ದಾಖಲೆಗಳು ಸಿಗುವುದು ಕಡಿಮೆ. ಹೀಗಾಗಿ ಇತಿಹಾಸದಲ್ಲಿ ಕೆಲ ದೇಸಗತಿಗಳ ರಂಗಭೂಮಿ ಕೊಡುಗೆಗಳ ಕುರಿತು ಮಾಹಿತಿ ಸಿಗುವುದಿಲ್ಲ. ಈ ಹಿನ್ನಲೆಯಲ್ಲಿ ರಂಗಭೂಮಿಗೆ ಕೊಡುಗೆ ನೀಡಿರುವ ಕುರಿತು ದಾಖಲೆಗಳಿರುವ ದೇಸಗತಿಗಳನ್ನು ಅಧ್ಯಯನದ ವ್ಯಾಪ್ತಿಗೊಳಪಡಿಸಲಾಗಿದೆ.

ಬೆಳಗಾವಿ ಪರಿಸರದ ದೇಸಗತಿಗಳು ರಂಗಭೂಮಿ ಮತ್ತು ಕಲಾವಿದರಿಗೆ ಪ್ರೋತ್ಸಾಹವನ್ನು ನೀಡಿವೆ. "ದೇಸಗತಿಗಳು ಅರವಟ್ಟಿಗೆ ನಿರ್ಮಾಣ, ಅನ್ನದಾಸೋಹ, ಬಡವರ ಕಲ್ಯಾಣ ಕಾರ್ಯಕ್ರಮಗಳು, ಶಾಲೆಗಳ ನಿರ್ಮಾಣ ಮುಂತಾದ ಜನಪರ ಕಾರ್ಯಗಳ ಜೊತೆಗೆ ರಂಗಭೂಮಿಗೂ ಸಹಾಯ ಮಾಡಿದರು. ಜಾತ್ರೆ–ಉತ್ಸವ, ಹಬ್ಬ–ಹರಿದಿನಗಳಲ್ಲಿ ನಾಟಕ ಮಂಡಳಿಗಳನ್ನು ಗ್ರಾಮಕ್ಕೆ ಕರೆಸಿ ಪ್ರದರ್ಶನ ಏರ್ಪಡಿಸುವುದು ಇಲ್ಲವೇ ಮಂಡಳಿಗಳು ತಮ್ಮ ಗ್ರಾಮಗಳಿಗೆ ನಾಟಕ ಪ್ರದರ್ಶನಕ್ಕೆ ಬಂದಾಗ, ಮಂಡಳಿಯ ಎಲ್ಲ ಕಲಾವಿದರನ್ನು ತಮ್ಮ ವಾಡೆಗೆ ಕರೆಸಿ ಊಟ ನೀಡುವುದು, ದಿನನಿತ್ಯ ಊಟದ ವ್ಯವಸ್ಥೆ ಮಾಡುವುದರ ಜೊತೆಗೆ ನಾಟಕ ಪ್ರದರ್ಶನದ ಸಂದರ್ಭದಲ್ಲಿ ಕಿಡಿಗೇಡಿಗಳು ಗದ್ದಲ ಮಾಡದಂತೆ ಕಾವಲುಗಾರರನ್ನು ದೇಸಗತಿ ಮುಖ್ಯಸ್ಥರಾಗಿದ್ದ ದೇಸಾಯಿಯರು ನೇಮಿಸುತ್ತಿದ್ದರು. ನಾಟಕ ಮಂಡಳಿ ನಷ್ಟ ಅನುಭವಿಸಿದ ಸಂದರ್ಭದಲ್ಲಿ ಸಹಾಯ ಕೂಡಾ ದೇಸಗತಿಗಳು ಮಾಡಿವೆ. ನಾಟಕ ಮಂಡಳಿಗಳು ದೇಸಗತಿ ಮನೆತನದವರಿಗೆ ಗೌರವ ಕೊಡುತ್ತಿದ್ದರು. ದೇಸಗತಿ ಕುಟುಂಬದ ಸದಸ್ಯರು ನಾಟಕ ನೋಡುವುದು ಕೂಡಾ ದೊಡ್ಡತನವಾಗಿತ್ತು. ಅದಕ್ಕೆ ಪ್ರತಿಯಾಗಿ ನಾಟಕ ಮಂಡಳಿಗಳಿಗೆ 'ಆಯಾರ' ರೂಪದಲ್ಲಿ ಧನ ಸಹಾಯವನ್ನು ದೇಸಗತಿಗಳು ನೀಡುತ್ತಿದ್ದವು".[2]

**ಚಚಡಿ ದೇಸಗತಿ**

ಬೆಳಗಾವಿ ಪರಿಸರದ ಸವದತ್ತಿ ತಾಲೂಕಿನ ಚಚಡಿ ಗ್ರಾಮ ನಾಲ್ಕು ಶತಮಾನಗಳ ಹಿಂದೆಯೇ ದೇಸಗತಿಯಾಗಿ ರೂಪ ತಳೆಯಿತು. ಈ ಗ್ರಾಮದ ಸುತ್ತಮುತ್ತ ಬೆಟ್ಟಗುಡ್ಡಗಳಿದ್ದವು. ಚಚಡಿಯಿಂದ ಮುರಗೋಡು ಅಲ್ಲಿಂದ ನೇಸರಗಿಗೆ ಹೋಗಬೇಕಾದರೆ ಕಳ್ಳರ ಕಾಟವಿತ್ತು. ಕಳ್ಳಕಾಕರ ಭೀತಿ ಹೋಗಲಾಡಿಸಲು ಚಚಡಿಯಲ್ಲಿ ಕೋಟೆಕಟ್ಟಿ ದೇಸಗತಿ ಆರಂಭಿಸಲಾಯಿತು. ಆಗಾಗ ದಂಡಿನ ದಾಳಿ ಕೂಡಾ ಈ ಭಾಗದ ಮೇಲೆ ಉಂಟಾಗುತ್ತಿತ್ತು ಹೀಗಾಗಿ ಕಳ್ಳಕಾಕರಿಂದ ದವಸ–ಧಾನ್ಯಗಳನ್ನು ರಕ್ಷಿಸಲು ಜನರ ಪ್ರಾಣ ಉಳಿಸಲು ಕೋಟೆ ನಿರ್ಮಾಣವಾಗಿ ದೇಸಗತಿ ಆರಂಭವಾಯಿತು. ಚಚಡಿ ದೇಸಾಯರಿಗೆ ಬ್ರಿಟಿಷ್ ಸರಕಾರ ಚಚಡಿ ಸುತ್ತಮುತ್ತಲಿರುವ ಎಂಟನೂರ ಎಕರೆಯನ್ನು ಸನ್ನದ್ದಾಗಿ ನೀಡಿತು. ದೇಸಗತಿಯ ಅಧೀನದಲ್ಲಿದ್ದ ಹಳ್ಳಿಗಳನ್ನು 'ಚಾವರಾತ ಹಳ್ಳಿಗಳು' ಎಂದು ಕರೆಯುತ್ತಿದ್ದರು. ಚಚಡಿ ದೇಸಗತಿಯು ಹದಿನೈದು ಹಳ್ಳಿಗಳನ್ನು ಹೊಂದಿತ್ತು. ಮುಂದು ಮೂವತ್ತು ಹಳ್ಳಿಗಳು ದೇಸಗತಿಯ ಆಡಳಿತಕ್ಕೆ ಒಳಪಟ್ಟವು.

[1]ಮಾರದ ಬಿ.ಎಚ್ ಮತ್ತು ಏಳುಕೋಟಿ ಜಿ.ಶಿವರಾಯಪ್ಪ. ಸರದಾರ ವ್ಹಿ.ಜಿ. ನಾಯಕ ಚಚಡಿ ದೇಸಾಯಿಯವರು. ಕೆ.ಎಲ್.ಇ ಸಂಸ್ಥೆಯ ಶತಮಾನೋತ್ಸವ ಸಾಹಿತ್ಯ ಮಾಲಿಕೆ–60, ಪು.5

[2]ವಕ್ತೃ: ಡಾ. ಬಾಳಣ್ಣ ಶಿಗೀಹಳ್ಳಿ (ವಯಸ್ಸು 68), ಸಂದರ್ಶನ ದಿನಾಂಕ : ಆಗಸ್ಟ 30, 2021

**ರಂಗಭೂಮಿಗೆ ಚಚಡಿ ದೇಸಗತಿ ನೀಡಿದ ಪ್ರೋತ್ಸಾಹ**

ಚಚಡಿ ದೇಸಗತಿಯ ಸರದಾರ ವೀರಭದ್ರಪ್ಪ ಗುಣಪ್ಪನಾಯಕ ಬಹದ್ದೂರ ದೇಸಾಯಿಯರು ಕಲಾಪ್ರೇಮಿ, ಸಂಗೀತಾಸಕ್ತರು ಮತ್ತು ಸಾಹಿತ್ಯ ಪ್ರೋತ್ಸಾಹಕರಾಗಿದ್ದರು. ಸಾವಿರ ಹಾಡುಗಳ ಸರದಾರ ಎಂದೇ ಪ್ರಸಿದ್ಧರಾಗಿದ್ದ ಹುಕ್ಕೇರಿ ಬಾಳಪ್ಪನವರಿಂದ ವಾಡೆಯಲ್ಲಿ ಸಂಗೀತ ಕಾರ್ಯಕ್ರಮ ಏರ್ಪಡಿಸಿ ಪ್ರೋತ್ಸಾಹ ನೀಡಿದರು. ಬ್ರಿಟಿಷ್ ಸರಕಾರದ ಅಧಿಕಾರಿಗಳು ವಾಡೆಗೆ ಭೇಟಿಕೊಟ್ಟಾಗ ಅವರ ಮನರಂಜನೆಗಾಗಿ ಜಾನಪದ ಕತೆಗಳಾದ ಬಯಲಾಟ, ಪಾರಿಜಾತ ಏರ್ಪಡಿಸುತ್ತಿದ್ದರು. ಜಿಲ್ಲಾ ಕಲೆಕ್ಟರ್ ಆಗಿದ್ದ ರಾವಬಹದ್ದೂರ ಅರಟಾಳ ರುದ್ರಗೌಡರು ಆಗಸ್ಟ 24, 1913 ರಂದು ಚಚಡಿ ವಾಡೆಗೆ ತಾಂಬೂಲ ಸಮಾರಂಭಕ್ಕೆ ಬಂದಾಗ ಲಿಂಗಾಸಾನಿ ಹಾಗೂ ಬಡಕುಂದ್ರಿ ಬಸಪ್ಪನವರಿಂದ ಶ್ರೀ ಕೃಷ್ಣ ಪಾರಿಜಾತ ಆಟ ನಡೆಸಿದ್ದರು. ಅಲ್ಲದೇ ಜಾನಪದ ಕಲೆಗಳಾದ ಬಯಲಾಟ, ಪಾರಿಜಾತ, ಭಜನೆ, ಕುಸ್ತಿ ಮುಂತಾದವುಗಳಿಗೆ ಪ್ರೋತ್ಸಾಹ ನೀಡಿದರು. ಕಲಾವಿದರಿಗೆ ಡಪ್ಪು, ಹಾರ್ಮೋನಿಯಂ, ತಬಲ ಮುಂತಾದ ವಾದ್ಯಗಳನ್ನು ಕೊಡಿಸುತ್ತಿದ್ದರು. ತಮ್ಮ ವಾಡೆಯಲ್ಲಿ ಕಲ್ಲೋಳಿ ರಸೂಲನೆಂಬ ಪ್ರಸಿದ್ಧ ಲಾವಣಿಕಾರನಿಗೆ ಆಶ್ರಯ ನೀಡಿದ್ದರು. ಎಣಗಿ ಬಾಳಪ್ಪನವರ ಕಂಪನಿ ಚಚಡಿ ಗ್ರಾಮದಲ್ಲಿ ಕ್ಯಾಂಪ್ ಹಾಕಿದಾಗ ನಷ್ಟದ ಪರಿಸ್ಥಿತಿಯಲ್ಲಿ ಪರಿಸ್ಥಿತಿಯಲ್ಲಿ ನಡೆದಿತ್ತು. ಇದನ್ನು ಗಮನಿಸಿದ ದೇಸಾಯರು ನಾಟಕ ಕಂಪನಿಗೆ ಬೇಕಾಗುವ ಹೊಸ ಸಾಮಗ್ರಿಗಳನ್ನು ನೀಡುವುದರ ಜೊತೆಗೆ ತಮ್ಮ ವಾಡೆ ಜಾಗದಯಲ್ಲಿಯೇ ನಾಟಕ ಪ್ರದರ್ಶನಕ್ಕೆ ಅವಕಾಶ ನೀಡಿ ಪ್ರೋತ್ಸಾಹ ನೀಡಿದರು. ಇದರಿಂದಾಗಿ ಹೆಚ್ಚಿನ ಪೇಕ್ಷಕರನ್ನು ಆಕರ್ಷಿಸುವುದರ ಜೊತೆಗೆ ಹೆಚ್ಚೆಚ್ಚು ಹಣವೂ ಕೂಡ ಸಂಗ್ರಹವಾಗಿ ಎಣಗಿ ಬಾಳಪ್ಪನವರ ಕಂಪನಿ ಸುಧಾರಿಸಿತು. ಇದಕ್ಕೆ ಪ್ರತಿಯಾಗಿ ಎಣಗಿ ಬಾಳಪ್ಪನವರು ದೇಸಾಯರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಾರೆ. ಹೀಗೆ ದೇಸಾಯರು ಹತ್ತಾರು ನಾಟಕ ಕಂಪನಿಗಳಿಗೆ ಪ್ರೋತ್ಸಾಹ ಸಹಕಾರ ನೀಡಿ ಕಲಾಕಾರರ ಬದುಕಿಗೆ ಆಸರೆಯಾದವರು.[3] ತಮ್ಮ ಗ್ರಾಮ ಚಚಡಿಯಲ್ಲಿ ಬೆಳಗಾವಿ ಜಿಲ್ಲೆಯ ಬರಹಗಾರರ ಸಮ್ಮೇಳನವನ್ನು ಏರ್ಪಡಿಸಿದರು ಎಂಟರಿಂದ ಹತ್ತು ಹೆಸರಾಂತ ಬರಹಗಾರರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಕನ್ನಡ ನಾಡಿನ ಜಾನಪದ ಕಲೆ, ಸಾಹಿತ್ಯ ಹಾಗೂ ರಂಗ ಭೂಮಿಗೆ ಚಚಡಿ ದೇಸಗತಿಯ ಕೊಟ್ಟ ಪ್ರೋತ್ಸಾಹ ಅದಮ್ಯವಾದದ್ದು.

**ನೇಗಿನಹಾಳ ಇನಾಮದಾರ ದೇಸಗತಿ**

ನೇಗಿನಹಾಳ ದೇಸಗತಿಯ ಇನಾಮದಾರರು ವಿಜಯನಗರ ಸಾಮ್ರಾಜ್ಯದ ಮಾಂಡಲೀಕರಾಗಿದ್ದರು. ಸೊಪ್ಪಿಮಠ ಸ್ವಾಮಿಗಳಿಂದ ನೇಗಿನಹಾಳದಲ್ಲಿ ನೆಲೆನಿಂತರು. ಶೂರ ಸಂಗೊಳ್ಳಿ ರಾಯಣ್ಣನನ್ನು ಹಿಡಿಯುವಲ್ಲಿ ಪ್ರಮುಖ ಪಾತ್ರವಹಿಸಿದ್ದರಿಂದ ಇವರಿಗೆ ಬ್ರಿಟಿಷರು ಅನೇಕ ಹಳ್ಳಿಗಳ ಒಡೆಯನೆಂದು ಅಧಿಕಾರ ನೀಡಿದರು. ಇದರಿಂದ ಈ ಮನೆತನಕ್ಕೆ ಇನಾಮದಾರ ಮನೆತನವೆಂಬ ಹೆಸರು ಬಂದಿತು. 'ವೆಂಕನಗೌಡ' ಈ ದೇಸಗತಿಯ ಮೂಲ ಪುರುಷ. ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಪ್ರಭಾವಶಾಲಿಯಾಗಿದ್ದ ಇನಾಮದಾರರು ಹಳ್ಳಿಗಳ ಸುಧಾರಣೆ, ಜನರ ಯೋಗಕ್ಷೇಮ, ಧಾರ್ಮಿಕ ಸುಧಾರಣೆ, ಶಿಕ್ಷಣಕ್ಕಾಗಿ ಪ್ರೋತ್ಸಾಹ, ರಂಗಭೂಮಿಗೆ ಪ್ರೋತ್ಸಾಹ ನೀಡಿದ್ದಾರೆ.

[3]ಹಾನಗಲ್ಲ ಸು ಸಂತೋಷ. (2007). ಬೆಳಗಾವಿ ಜಿಲ್ಲೆಯ ವಾಡೆಗಳು: ಒಂದು ಅಧ್ಯಯನ. ಪು.201

**ರಂಗಭೂಮಿಗೆ ನೀಡಿದ ಪ್ರೋತ್ಸಾಹ**

ನೇಗಿನಹಾಳದಲ್ಲಿ ಧಾರ್ಮಿಕ ಆಚರಣೆ, ಜಾತ್ರೆ–ಉತ್ಸವಗಳ ಸಂದರ್ಭಗಳಲ್ಲಿ ಇನಾಮದಾರರ ನೇತೃತ್ವ ಇರುತ್ತದೆ. ಪಂಡರಾಪುರ ವಿಠ್ಠಲ ಜಾತ್ರೆ ಹಾಗೂ ಗರಗದ ಮಡಿವಾಳೇಶ್ವರ ಜಾತ್ರೆಗಳು ಈ ಗ್ರಾಮದಲ್ಲಿ ವಿಜೃಂಭಣೆಯಿಂದ ಜರಗುತ್ತವೆ. ಈ ಸಂದರ್ಭದಲ್ಲಿ ಜನಪದ ರಂಗಭೂಮಿ ಮತ್ತು ಗ್ರಾಮದ ಕಲಾವಿದರು ಸೇರಿಕೊಂಡು ಅನೇಕ ನಾಟಕಗಳನ್ನು ಪ್ರದರ್ಶಿಸುತ್ತಾರೆ. ರಸಮಂಜರಿ ಕಾರ್ಯಕ್ರಮಗಳು ಜರಗುತ್ತವೆ. ಇದಕ್ಕೆಲ್ಲ ಇನಾಮದಾರ ಮನೆತನ ಪ್ರೋತ್ಸಾಹ ನೀಡುತ್ತಾ ಬಂದಿದೆ. ಮೊದಲು ಜಾತ್ರೆ ಸಂದರ್ಭದಲ್ಲಿ ಏಣಗಿ ಬಾಳಪ್ಪನವರ ಕಲಾವೈಭವ ನಾಟ್ಯ ಸಂಘ ಹಾಗೂ ಇತರ ಮಂಡಳಿಗಳು ಗ್ರಾಮಕ್ಕೆ ಬರುತ್ತಿದ್ದವು. ಆ ಸಂದರ್ಭದಲ್ಲಿ ಇನಾಮದಾರರು ಸಂಪೂರ್ಣ ಪ್ರೋತ್ಸಾಹ ನೀಡುತ್ತಿದ್ದರೆಂದು ಗ್ರಾಮಸ್ಥರು ಹೇಳುತ್ತಾರೆ "ಇನಾಮದಾರರು ಬಯಲಾಟ, ಪಾರಿಜಾತ, ಕುಸ್ತಿ ಮುಂತಾದವುಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಬಯಲಾಟಕ್ಕೆ ಬೇಕಾಗುವ ಡಪ್ಪು, ಹಾರ್ಮೋನಿಯಂ, ತಬಲಾ ಮೊದಲಾದವುಗಳನ್ನು ಕಲಾವಿದರಿಗೆ ಇನಾಮದಾರರೇ ಕೊಡಿಸಿ ಊರ ಜಾತ್ರೆಯ ಸಂದರ್ಭದಲ್ಲಿ ಆಡಿಸುತ್ತಿದ್ದರು. ಈ ವೇಳೆಗೆ ಇಡೀ ನಾಟಕ ಕಂಪನಿಯ ವೆಚ್ಚವೆನ್ನೆಲ್ಲ ವಾಡೆಯಿಂದಲೇ ಕೊಡಲಾಗುತ್ತಿತ್ತು. ಅಲ್ಲದೇ ಆಟದ ಸಮಯದಲ್ಲಿ ಸೇರಿದ ಜನತೆಗೆ, ಕಲಾವಿದರಿಗೆ ಊಟೋಪಚಾರದ ವ್ಯವಸ್ಥೆ ನಡೆಯುತ್ತಿತ್ತು. ಆಟ ನಡೆಯುವಾಗ ಕಾವಲುಗಾರರನ್ನು ನೇಮಿಸಿ ಒಂದೊಂದು ಬಂದೂಕನ್ನು ಕೊಡಿಸಿ ಗಸ್ತಿ ತಿರುಗಲು ಆದೇಶಿಸುತ್ತಿದ್ದರು."[4] ಅಷ್ಟೇ ಅಲ್ಲದೇ ಊರಿನ ಕಲಾಕಾರರಿಂದ 'ಪಾರಿಜಾತ' ಸೌದಿ, ಆಟಗಳನ್ನು ಆಡಿಸಿ ಪ್ರೋತ್ಸಾಹಿಸಿರುವುದನ್ನು ಕಾಣಬಹುದಾಗಿದೆ.

**ತಲ್ಲೂರ ದೇಸಗತಿ**

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ತಲ್ಲೂರ ಗ್ರಾಮ ರಾಷ್ಟ್ರೀಯ ವಿಮೋಚನಾ ಚಳುವಳಿಯ ತೀವ್ರತೆ ಹೆಚ್ಚಾದ ಸಂದರ್ಭದಲ್ಲಿ ಚಳುವಳಿಗಾರರು ಆಂಗ್ಲ ಪ್ರಭುತ್ವ ವಿರುದ್ದದ ಕೋಪವನ್ನು ಪ್ರಭುತ್ವಕ್ಕೆ ನಿಷ್ಠರಾಗಿದ್ದ ದೇಸಗತಿ ಅಥವಾ ವಾಡೆಗಳತ್ತ ತಿರುಗಿದ್ದರಿಂದ, 1942ರ ಚಳುವಳಿಯ ಕಾಲದಲ್ಲಿ ವಾಡೆಗಳಲ್ಲಿರುವ ಎಲ್ಲ ದಾಖಲೆಗಳನ್ನು ಸುಟ್ಟರು. ಹೀಗಾಗಿ ಈಗ ವಾಡೆಯಲ್ಲಿ ಮತ್ತು ವಾಡೆಯ ವಾರಸುದಾರರಲ್ಲಿ ಯಾವುದೇ ಲಿಖಿತ ದಾಖಲೆಗಳು ಇಲ್ಲ. ಇತಿಹಾಸದ ಬೇರೆ ಬೇರೆ ಆಯಾಮಗಳ ಮೂಲಕ ವಾಡೆಯ ಇತಿಹಾಸವನ್ನು ಅರ್ಥ ಮಾಡಿಕೊಳ್ಳುವ ಸಾಧ್ಯತೆ ಇಂದು ಇಲ್ಲದಾಗಿದೆ. ಕ್ರಿ.ಶ.1800ರ ನಂತರದ ತಲ್ಲೂರಿನ ಇತಿಹಾಸ ನಮಗೆ ಲಭ್ಯವಿದೆ.

ಈ ದೇಸಗತಿ ಮನೆತನದ ಮೂಲ ಪುರಷ ಬೆಳವಾಡಿ ರಾಜ್ಯವನ್ನಾಳುತ್ತಿದ್ದ ಚಂದ್ರಶೇಖರ ರಾಜ ಸಿದ್ದಪ್ಪನಾಯಕ, ಸಿದ್ದಪ್ಪ ಬಸಪ್ಪ ನಾಯಕ ಈತನ ಸಹೋದರರಾಗಿದ್ದರು. ಕ್ರಿ.ಶ. 1511 ಸುಮಾರಿಗೆ ಸಿದ್ದಪ್ಪನಾಯಕ ತನ್ನ ಸಹೋದರರೊಂದಿಗೆ ವಿಭಾಗ ಮಾಡಿಕೊಂಡು ತಲ್ಲೂರಿನಲ್ಲಿ ಮುರಗೋಡ ಮೊದಲಾದ ಮೂವತ್ತು ಹಳ್ಳಿಗಳನ್ನು ಒಳಗೊಂಡು ದೇಸಾಯಿಯಾದ ಅಧಿಕೃತ ವಂಶಸ್ಥರ ವಿಭಾಗ ಮಾಡಿಕೊಂಡ ಪರಿಣಾಮ ತಲ್ಲೂರ ದೇಶಗತಿ ಹುಟ್ಟುಕೊಂಡಿತು. ಹತ್ತು ಎಕರೆಯಲ್ಲಿ ನಿರ್ಮಾಣವಾಗಿರುವ ವಾಡೆಯು ಹೊರಾಂಗಣ ಎರಡು ಎಕರೆಯಷ್ಟಿದೆ. ಗ್ರಾಮದ ಧಾರ್ಮಿಕ ಸಂಪ್ರದಾಯಗಳಲ್ಲಿ ದೇಸಗತಿಯ ಮನೆತನದವರ ನೇತೃತ್ವ ಇರುತ್ತದೆ. ಈ ದೇಸಗತಿಯು ಸವದತ್ತಿ ಭಾಗದಲ್ಲಿ ಸಾಂಸ್ಕೃತಿಕ ಕಲೆಗಳಿಗೆ ಉದಾರ ಪ್ರೋತ್ಸಾಹ ನೀಡಿತು.

[4]ಮಾರದ ಬಿ.ಎಚ್. ಮತ್ತು ಏಳುಕೋಟಿ ಜಿ.ಶಿವರಾಯಪ್ಪ, ಪೂರ್ವೋಕ್ತ., ಪು.5.

"ವಾಡೆಯ ಮುಂದಿನ ಎರಡು ಎಕರೆಯಷ್ಟು ಹೊರಾಂಗಣದಲ್ಲಿ ರಂಗಭೂಮಿ ಚಟುವಟಿಕೆಗಳು ನಡೆಯುತ್ತಿದ್ದವು. ಊರಿನ ಗ್ರಾಮದೇವತೆ ದ್ಯಾಮವ್ವನ ಜಾತ್ರೆ- ಉತ್ಸವ ಹಾಗೂ ಇನ್ನಿತರ ಹಬ್ಬ-ಹರಿದಿನ ಸಂದರ್ಭದಲ್ಲಿ ಗ್ರಾಮಕ್ಕೆ ಅನೇಕ ಜನಪದ ರಂಗಕಲೆಗಳನ್ನು ಆಹ್ವಾನಿಸುತ್ತಿದ್ದರು. ಶ್ರೀಕೃಷ್ಣ ಪಾರಿಜಾತ ಮೇಳ, ಸಣ್ಣಾಟ ಮೇಳಗಳನ್ನು ಸ್ಥಳೀಯ ಕಲಾವಿದರಿಂದ ಆಡಿಸುತ್ತಿದ್ದರು. ಬೆಳಗಾವಿ ಪರಿಸರದ ಪ್ರಮುಖ ನಾಟಕ ಮಂಡಳಿಗಳನ್ನು ಆಹ್ವಾನಿಸಿ ಪ್ರದರ್ಶನ ಆಯೋಜಿಸುತ್ತಿದ್ದರು. ಕಲಾವಿದರಿಗೆ ತಮ್ಮ ವಾಡೆಯಲ್ಲಿ ಊಟದ ವ್ಯವಸ್ಥೆ ಇರುತ್ತಿತ್ತು. ಪ್ರದರ್ಶನದ ಕೊನೆಯ ದಿನ ಕಲಾವಿದರಿಗೆ ಮಂಡಳಿಗಳಿಗೆ ಹಣದ ಸಹಾಯ ಮಾಡಿದ್ದುಂಟು."[5]

**ತುರಮರಿ ದೇಸಗತಿ**

ತುರಮರಿ ದೇಸಗತಿಯ ಮುಖ್ಯಸ್ಥರು ಬಾಳೇಹಳ್ಳಿ ಪೀಠದ ಪರಂಪರೆಗೆ ಸೇರಿದ್ದವರಾಗಿದ್ದಾರೆ. ಆದ್ದರಿಂದ ಈ ವಾಡೆಯನ್ನು 'ಜಂಗಮವಾಡೆ' ಎಂದು ಜನರು ಕರೆಯುತ್ತಾರೆ. ಮಲಪ್ರಭಾ ನದಿಯ ತೀರದಲ್ಲಿರುವ ಅಚ್ಚುಕಟ್ಟಾದ ಗ್ರಾಮವೇ ತುರಮರಿ. ಈ ಗ್ರಾಮವು ಬೈಲಹೊಂಗಲ ತಾಲೂಕಿನಲ್ಲಿರುವ ಪ್ರಮುಖ ಗ್ರಾಮಗಳಲ್ಲಿ ಒಂದಾಗಿದೆ. ಊರಿನ ಮೇಲಿನ ಪ್ರಭುತ್ವ ಇಲ್ಲದಿದ್ದರೂ ವಾಡೆಯ ಮನೆತನದವರೇ ಊರಿನಲ್ಲಿರುವ ಹತ್ತಾರು ಸಂಪ್ರದಾಯಗಳ ನೇತೃತ್ವವಹಿಸಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ.

**ರಂಗಭೂಮಿಗೆ ನೀಡಿದ ಪ್ರೋತ್ಸಾಹ**

ತುರಮರಿ ವಾಡೆಯ ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿದ ಪ್ರೋತ್ಸಾಹ ಅಮೋಘವಾದುದು. ವಾಡೆಯ ಮನೆತನದವರು ಧಾರ್ಮಿಕ ಪರಂಪರೆಯವರಾಗಿದ್ದರಿಂದ ಧಾರ್ಮಿಕ ಆಚರಣೆಗಳು, ಸಂಪ್ರದಾಯಗಳ ಮೂಲಕ ರಂಗಭೂಮಿಗೆ ಪ್ರೋತ್ಸಾಹ ನೀಡಿದರು. "ವಾಡೆಯ ಮಹಾದ್ವಾರದ ಮುಂದೆ ಸುಮಾರು ಎರಡು ಎಕರೆ ಖುಲ್ಲಾ ಭೂಮಿ ಇದೆ. ಈ ಜಾಗದಲ್ಲಿ ಮೊದಲು ಧಾನ್ಯಗಳ ರಾಶಿ ನಡೆಯುತ್ತಿತ್ತು. ಅಲ್ಲದೇ ಸಂಗೀತ, ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಗಳಿಗೂ ಇದು ಉಪಯೋಗವಾಗುತ್ತಿತ್ತು."[6] ವಾಡೆಯ ಮಹಾದ್ವಾರದ ಬಲಭಾಗದಲ್ಲಿ ವಾಡೆಯ ಕುಟುಂಬಸ್ಥರು ಹಾಗೂ ಅಧಿಕಾರಿಗಳು ಮತ್ತು ಎಡಬದಿಗೆ ವಾಲಿಕಾರರು, ಹಳಬರು ಕುಳಿತುಕೊಳ್ಳುವ ವ್ಯವಸ್ಥೆಯಿತ್ತು. ಇವರು ಕುಳಿತುಕೊಂಡು ಮನರಂಜನ ಕಾರ್ಯಕ್ರಮಗಳನ್ನು ನೋಡಲು ವಾಡೆಯ ಮಹಾದ್ವಾರದ ಎಡ-ಬಲ ಎರಡು ದೊಡ್ಡಕಟ್ಟೆಗಳನ್ನು ನಿರ್ಮಿಸಲಾಗಿದೆ. ಇತ್ತೀಚಿನವರೆಗೂ ಅಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿವೆ ಎಂದು ಈ ಗ್ರಾಮದ ಜನರು ಹೇಳುತ್ತಾರೆ.

ತುರಮರಿ ದೇಸಗತಿ ಮನೆತನದವರು ನೀಡಿದ ಪ್ರೋತ್ಸಾಹದಿಂದ ತುರಮರಿ ಗ್ರಾಮದಲ್ಲಿ ಜಮಖಂಡಿಯ 'ಅಪ್ಪಾಲಾಲ್ ನದಾಫ್' 'ಶ್ರೀಕೃಷ್ಣ ಪಾರಿಜಾತ' ಆಟವನ್ನು ಸತತ ಇಪ್ಪತ್ತೊಂದು ವರುಷಗಳ ಕಾಲ ಪ್ರದರ್ಶಿಸಿದನು. ಹಕ್ಕಿ ನಿಂಗಪ್ಪ ಮತ್ತು ಕೂಡ್ಲಿ ಸಂಗಪ್ಪ ನೇತೃತ್ವದ ಸಂಗೊಳ್ಳಿ ಗ್ರಾಮದ 'ಸಂಗಮೇಶ್ವರ ನಾಟ್ಯ ಸಂಘ'ವು 'ಸಂಗೊಳ್ಳಿ ರಾಯಣ್ಣ' ನಾಟಕವನ್ನು ಎಳರಿಂದ ಎಂಟು ವರುಷಗಳ ಕಾಲ ವಾಡೆ ಮನೆತನದವರ ಪ್ರೋತ್ಸಾಹದಿಂದ ಪ್ರದರ್ಶಿಸಿತು. ಗುಬ್ಬಿ ವೀರಣ್ಣವರ ನಾಟಕ ಮಂಡಳಿ ತುರಮರಿ ಗ್ರಾಮಕ್ಕೆ ಬಂದಾಗ ಅದರ ಯಶಸ್ವಿ ಪ್ರದರ್ಶನಕ್ಕೆ ಈ ವಾಡೆಯು ಸಕಲ ರೀತಿಯಲ್ಲೂ

---

[5] ವಕ್ತೃ: ಅನಿತಾದೇವಿ ದೇಸಾಯಿ. ತಲ್ಲೂರ ವಾಡೆಯ ಇಂದಿನ ವಾರಸುದಾರರು, ಸಂದರ್ಶನ ದಿನಾಂಕ ಆಗಸ್ಟ್, 8, 2021

[6] ಹಾನಗಲ್ಲ ಸು ಸಂತೋಷ. (2007). ಪೂರ್ವೋಕ್ತ., ಪು. 187

ಸಹಕಾರ ನೀಡಿತು. ಅನೇಕ ಜನಪದ ಕಲಾವಿದರು ಮತ್ತು ನಾಟಕ ಮಂಡಳಿಗಳಿಗೆ ಉದಾರ ಪ್ರೋತ್ಸಾಹ ತುರಮರಿ ವಾಡೆಯು ನೀಡಿತು. ಸಾಂಸ್ಕೃತಿಕ ಕ್ಷೇತ್ರಕ್ಕೆ ಮಾತ್ರವಲ್ಲದೆ ಸ್ವಾತಂತ್ರ್ಯ ಹೋರಾಟಕ್ಕೂ ಕೊಡುಗೆ ನೀಡಿದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹೋರಾಟಗಾರರಿಗೆ ರಕ್ಷಣೆ ನೀಡಲಾಗಿತ್ತು. ಆದ್ದರಿಂದ ಬ್ರಿಟಿಷರು ಈ ವಾಡೆಯನ್ನು ಕೆಲಕಾಲ ವಶಪಡಿಸಿಕೊಂಡಿದ್ದರು ಎಂಬುದು ಇತಿಹಾಸದಿಂದ ತಿಳಿದು ಬರುತ್ತದೆ.

**ಉಪಸಂಹಾರ**

ಒಟ್ಟಾರೆಯಾಗಿ ಕನ್ನಡ ರಂಗಭೂಮಿಯು ಭಾರತೀಯ ಸಾಹಿತ್ಯ ಮತ್ತು ರಂಗಭೂಮಿ ಪರಂಪರೆಯಲ್ಲಿ ಮಹತ್ವವಾದ ಸ್ಥಾನವನ್ನು ಹೊಂದಿದೆ. ಕನ್ನಡ ನಾಡಿನ ಪ್ರಾದೇಶಿಕ ಸಂಸ್ಕೃತಿಗಳನ್ನು ಕಾಪಾಡಿಕೊಂಡು ಬಳಸುವಲ್ಲಿ ದೇಸಗತಿಗಳು ಪ್ರಮುಖ ಪಾತ್ರವಹಿಸಿವೆ. ದೇಸಗತಿಗಳು ಸ್ಥಳಿಯ ಆಡಳಿತದಲ್ಲಿ ಮುಖ್ಯ ಕೇಂದ್ರಗಳಾಗಿದ್ದರಿಂದ ಆಯಾ ಪ್ರಾದೇಶಿಕ ರಂಗಭೂಮಿಯನ್ನು ಪೋಷಿಸಿ ಬೆಳೆಸಿದವು. ಬೆಳಗಾವಿ ಪರಿಸರದ ವೃತ್ತಿ ರಂಗಭೂಮಿ ಬೆಳವಣಿಗೆಯಲ್ಲಿಯೂ ದೇಸಗತಿಗಳು ಪ್ರೋತ್ಸಾಹ ನೀಡಿದವು.

**ಪರಾಮರ್ಶನ/ಆಧಾರ ಗ್ರಂಥಗಳು**


- ಅಕ್ಷರ ಕೆ. ವಿ. (1994). ರಂಗ ಪ್ರಪಂಚ. ನ್ಯಾಶನಲ್ ಬುಕ್ ಟ್ರಸ್ಟ ಇಂಡಿಯಾ.
- ಕಟ್ಟಿಮನಿ ಎಲ್. ಆರ್. (2003). ಕರ್ನಾಟಕ ರಂಗಭೂಮಿ ವೈಭವ. ಜ್ಯೋತಿ ಕಾಲನಿ ಸಾಯಿನಗರ.
- ಜಕಬಾಳ ಎಸ್.ಎಫ್. (1999). ಕಲಾ ವೈಭವ ನಾಟ್ಯ ಸಂಘ ಬೆಳಗಾವಿ. ಕರ್ನಾಟಕ ವಿಶ್ವವಿದ್ಯಾಲಯ.
- ರಾಮಕೃಷ್ಣ ಮರಾಠೆ. (1990). ಉತ್ತರ ಕರ್ನಾಟಕ ವೃತ್ತಿ ರಂಗಭೂಮಿ. ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ.
- ಹಾನಗಲ್ಲ ಸು. ಸಂತೋಷ. (2007). ಬೆಳಗಾವಿ ಜಿಲ್ಲೆಯ ವಾಡೆಗಳು: ಒಂದು ಅಧ್ಯಯನ. ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ.